ಮರಗಳ ಕಡಿಯುವಿಕೆ ತಡೆಗಟ್ಟಲು ಶಾಸನ

೧೩೭೬. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧೪-೧೨-೧೯೭೭ರಂದು ಸಿರ್ಸಿಯಲ್ಲಿ ಅರಣ್ಯ ಮಂತ್ರಿಗಳು ಮಾಡಿದ ಪ್ರಕಟಣೆಯಂತೆ ಪಶ್ಚಿಮ ಘಟ್ಟದಲ್ಲಿ ಮತ್ತು ಕರ್ನಾಟಕದ ಇತರ ಅರಣ್ಯ ಪ್ರದೇಶಗಳಲ್ಲಿ ಮರಗಳ ಕಡಿತಲೆ ತಡೆಯಲು ಅಧಿನಿಯಮ ತರುವ ಬಗ್ಗೆ ಕ್ರಮಗಳೇನಾದರೂ ಕೈಗೊಂಡಿದ್ದೀರಾ ?

ಆ) ರಾಜ್ಯದಲ್ಲಿ ಈಗಿರುವ ಅರಣ್ಯ ಸಂಪತ್ತನ್ನು ಪರೀಕ್ಷಿಸಲು ಈಗಾಗಲೇ ಕೈಗೊಂಡ ಕ್ರಮಗಳೇನು ?

ಶ್ರೀ ಜೆ.ಎಸ್. ಬಾಗಲ್‌ಕೋಟೆ (ಅರಣ್ಯರಾಜ್ಯ ಮಂತ್ರಿಗಳು).—

ಅ) ಪಶ್ಚಿಮ ಘಟ್ಟದಲ್ಲಿ ಶೇಕಡ ೩೧ರಷ್ಟು ಮಾತ್ರ ಕಾದಿಟ್ಟ ಅರಣ್ಯ ಪ್ರದೇಶವಿದೆ. ಉಳಿದ ಶೇಕಡ ೭೧ರಷ್ಟು ಪ್ರದೇಶವು ಕಾದಿಟ್ಟ ಅರಣ್ಯದ ಹೊರಗಿನ ಪ್ರದೇಶವಾಗಿದೆ. ಈ ಹೊರಗಿನ ಪ್ರದೇಶದಲ್ಲಿ ಖಾಸಗಿ ಮತ್ತು ಜನ ಸಮುದಾಯ ವಿಶೇಷ ಹಕ್ಕುಗಳ ಪ್ರದೇಶಗಳು ಸೇರಿವೆ. ರಾಜ್ಯದ ನಿತ್ಯ ಹರಿದ್ವರ್ಣ ಮತ್ತು ಅರೆ ನಿತ್ಯ ಹರಿದ್ವರ್ಣ ಅರಣ್ಯಗಳಲ್ಲಿ ಮರಗಳನ್ನು ಕಡಿಯದಿರಲು ನಿಶ್ಚಯಿಸಿ ಸದ್ಯದಲ್ಲೇ ಆದೇಶ ಹೊರಡಿಸಲಾಗುತ್ತಿದೆ. ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣೆ) ವಿಧೇಯಕ ೧೯೭೭ ಎಂಬ ಶೀರ್ಷನಾಮೆಯ ವಿಧೇಯಕವನ್ನು ರಾಜ್ಯದ ಶಾಸನ ಸಭೆಗಳು ಈಗಾಗಲೇ ಅಂಗೀಕರಿಸಿವೆ. ಈ ವಿಧೇಯಕದಂತೆ, ಅರಣ್ಯ ಆಧಾರಿತ ಉದ್ದಿಮೆಗಳಜೊತೆಗೆ ಮಾಡಿಕೊಂಡ ಒಪ್ಪಂದಗಳ ಪರತ್ತುಗಳನ್ನು ಪರಿಸರ ಹಿತದೃಷ್ಟಿಯಿಂದ ಮತ್ತು ರಾಜ್ಯದ ಅರಣ್ಯ ಮತ್ತು ವನ್ಯಪ್ರಾಣಿ ಸಂರಕ್ಷಣೆ ದೃಷ್ಟಿಯಿಂದ ಪುನರ್ವಿಮರ್ಶಿಸಲು ಬದಲಿಸಲು ಅಥವಾ ರದ್ದುಗೊಳಿಸಲು ರಾಜ್ಯ ಸರ್ಕಾರ ಅಧಿಕಾರ ಪಡೆಯಲಿದೆ.

ಆ) ರಾಜ್ಯದಲ್ಲಿ ಈಗಿರುವ ಅರಣ್ಯ ಸಂಪತ್ತನ್ನು ಪರೀಕ್ಷಿಸಲು ಕೆಳಗೆ ತಿಳಿಸಿರುವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ.

೧) ವ್ಯವಸಾಯಕ್ಕಾಗಿ ಅರಣ್ಯ ಭೂ ಪ್ರದೇಶವನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸಲಾಗಿದೆ.

೨) ರಾಜ್ಯದಲ್ಲಿ ಕೈಗೊಳ್ಳುವ ಅಭಿವೃದ್ಧಿ ಯೋಜನೆಗಳ ಪೈಕಿ ಪ್ರತಿದಾನವಾಗಿ ಗಿಡ ನೆಡಲು ತಗಲುವ ವೆಚ್ಚವನ್ನು ಯೋಜನೆಯಿಂದಿಯಲ್ಲಿ ಭರಿಸಲು ಅವಕಾಶವಿರುವ ಪ್ರಮುಖ ಯೋಜನೆಗಳನ್ನು ಮಾತ್ರ ಕೈಗೊಳ್ಳಲು ಅಂಗೀಕರಿಸಲಾಗುತ್ತಿದೆ.

೩) ನೆಡುತೋಪು ಬೆಳೆಸುವ ಸಲುವಾಗಿ, ರಾಜ್ಯದ ಒಳ್ಳೆಯ ಅರಣ್ಯ ಪ್ರದೇಶಗಳನ್ನು ತೆರವು ಮಾಡುವುದನ್ನು ೧೯೮೧ರಿಂದ ನಿಲ್ಲಿಸಲಾಗಿದೆ.

೪) ೪೦ರಿಂದ ೪೫ವರ್ಷಗಳಲ್ಲಿ ಒಮ್ಮೆ ಆಯ್ಕೆ ಮಾಡಿ ಕಡಿತ ಮಾಡುವ ಮರಗಳ ಸಂಖ್ಯೆಯನ್ನು ಎಕರೆಗೆ ೬ರಿಂದ ೩ಕ್ಕೆ ಇಳಿಸಲಾಗಿದೆ. ಈ ವಿಧಾನದಿಂದ ಸಂಗ್ರಹಮಾಗುತ್ತಿರುವ ಮರಗಳಿಂದ ಜನರ ಮತ್ತು ಕೈಗಾರಿಕೆಗಳ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ. ರಾಜ್ಯದಲ್ಲಿ ಹತ್ತು ವರ್ಷಗಳ ಹಿಂದೆ ಸಂಗ್ರಹವಾಗುತ್ತಿರುವ ಮರದ ಪ್ರಮಾಣಕ್ಕೆ ಹೋಲಿಸಿದ್ದಲ್ಲಿ, ಈಗ ಇದರ ೧/೩ ಭಾಗ ಮಾತ್ರ ಮರ ಸಂಗ್ರಹವಾಗುತ್ತಿದೆ. ನಿತ್ಯ ಹರಿದ್ವರ್ಣ ಮತ್ತು ಅರೆ ನಿತ್ಯ ಹರಿದ್ವರ್ಣ ರಾಜ್ಯಗಳಲ್ಲಿ ಮರಗಳ ಕಡಿತವನ್ನು ನಿಲ್ಲಿಸಿರುವುದರಿಂದ, ಸಂಗ್ರಹವಾಗುತ್ತಿರುವ ಮರದ ಪ್ರಮಾಣ ಇನ್ನಿಷ್ಟು ಕಡಿಮೆ ಆಗಲಿದೆ.

೫) ಖಾಸಗಿ ಜನರಿಂದ ಗಿಡ ನೆಡುವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ.

೬) ಅರಣ್ಯ ಆಧಾರಿತ ಕಾರ್ಖಾನೆಗಳು ತಮಗೆ ಬೇಕಾದ ಕಚ್ಚಾ ಮಾಲನ್ನು ಜಂಟಿ ಉದ್ದಿಮೆಯಡಿಯಲ್ಲಿ ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತಿದೆ.

೭) ಅರಣ್ಯದಿಂದ ಸೌದೆ ಸಾಗಿಸುವುದನ್ನು ತಡೆಯಲು, ಸುಮಾರು ೧೨೩ ಸೌದೆ ಡಿಪೋಗಳಿಂದ ನೇರವು ದರಗಳಂತೆ ಸೌದೆಯನ್ನು ಜನರಿಗೆ ಪೂರೈಸಲಾಗುತ್ತಿದೆ.

೮) ರಾಜ್ಯದಲ್ಲಿ ಆಮದು ಮಾಡಿಕೊಳ್ಳುತ್ತಿರುವ ಮರದ ಮೇಲೆ ಆಮದು ಶುಲ್ಕವನ್ನು ಪೂರ್ತಿಯಾಗಿ ರದ್ದು ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸನ್ನು ಮಾಡಲಾಗಿದೆ.

೯) ಮರಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿರುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ಅರಣ್ಯ ಸಂಪತ್ತನ್ನು ರಕ್ಷಿಸುವ ಬಗ್ಗೆ ೯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಮುಖ್ಯವಾಗಿ ಅರಣ್ಯಗಳು ಸರಿಯಾದ ರೀತಿಯಲ್ಲಿ ಇದ್ದರೆ ಮಳೆ ಬೆಳೆಗಳಿಗೆ ಅನುಕೂಲವಾಗುತ್ತದೆ. ಹರಿಹರ ಪಾಲಿಫೈಬರ್ ಪೇಪರ್ ಮಿಲ್‌ಗಳಂಥ ಅನೇಕ ಇಂಡಸ್ಟ್ರಿಗಳು ರಾಜ್ಯದಲ್ಲಿ ಬರುತ್ತಿವೆ. ಇವುಗಳಿಗೆ ಕಚ್ಚಾಮಾಲನ್ನು ಅರಣ್ಯಗಳಿಂದಲೇ ಪೂರೈಸಬೇಕಾಗುತ್ತದೆ. ಇಂಡಸ್ಟ್ರಿಯವರು ಅರಣ್ಯದಿಂದ ಎಷ್ಟು ಎಕರೆಗಳಲ್ಲಿ ಮರಗಳನ್ನು ಪಡೆದು ಕೊಳ್ಳುತ್ತಾರೋ ಅಷ್ಟೇ ಪ್ರಮಾಣದಲ್ಲಿ ಗಿಡಗಳನ್ನು ನೆಡಬೇಕೆಂದು ನೀವು ಆದೇಶ ಕೊಟ್ಟಿದ್ದೀರಿ. ಆದರೆ, ಈ ನಿಯಮದ ಪ್ರಕಾರ ಕಟ್ಟುನಿಟ್ಟಾಗಿ ಅರಣ್ಯಗಳನ್ನು ಇಂಡಸ್ಟ್ರಿಯವರು ಪಾಲಿಸುತ್ತಿಲ್ಲ. ಅರಣ್ಯಗಳನ್ನು ಕಡಿದು ಆ ಜಾಗದಲ್ಲಿ ಗಿಡಗಳನ್ನು ನೆಡದೇ ಇರುವ ಇರುವ ಇಂಡಸ್ಟ್ರಿಗಳವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳೂ ಸಹ ಇಂಡಸ್ಟ್ರಿಯವರ ಜೊತೆ ಶಾಮಿಲಾಗಿ ಅರಣ್ಯಗಳನ್ನು ಕಡಿಯುವುದಕ್ಕೆ ಕಾರಣರಾಗಿದ್ದಾರೆ. ಈ ವಿಷಯ ಹೈಯರ್ ಲೆವೆಲ್‌ನಲ್ಲಿ ಇನ್‌ಸ್ಪೆಕ್ಷನ್ ಮಾಡಿದಾಗ ಮಾತ್ರ ಗೊತ್ತಾಗುತ್ತದೆ. ಅಧಿಕಾರಿಗಳು ತಮಗೆ ಎಷ್ಟು ಬೇಕೋ ಅಷ್ಟು ಸಂಗ್ರಿಯನ್ನು ಮಾಡಿಕೊಂಡು ಹೋಗಿಬಿಡುತ್ತಾರೆ. ಕೊನೆಗೆ ಸಫರ್ ಆಗುವುದು ರೈತ ಮತ್ತು ಜನಗಳು ಮಾತ್ರ. ಯಾವ ಇಂಡಸ್ಟ್ರಿಯವರು ಮರಗಳನ್ನು ಕಡಿದ ಜಾಗದಲ್ಲಿ ಪುನಃ ಗಿಡಗಳನ್ನು ನೆಡದೆ ಮೋಸ ಮಾಡುತ್ತಾರೋ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ? ನಿಮ್ಮ ಆದೇಶವನ್ನು ಪಾಲಿಸದೇ ಇರುವಂಥ ಕಂಪನಿಗಳ ಮೇಲೆ ಇದುವರೆಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಜಿ.ಎಸ್. ಬಾಗಲ್‌ಕೋಟೆ.—ಸನ್ಮಾನ್ಯ ಅಧ್ಯಕ್ಷರೇ, ಆದೇಶವನ್ನು ಪಾಲಿಸದೇ ಇದ್ದಂಥ ಉದ್ದಿಮೆಗಳವರ ಮೇಲೆ ಕಟ್ಟುನಿಟ್ಟಾಗಿ ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರ ಜೊತೆಗೆ,

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಗಲು ಹೊತ್ತಿನಲ್ಲಿ ಒಂದೂವರೆ ಗಂಟೆ. ರಾತ್ರಿ ಹೊತ್ತಿನಲ್ಲಿ ಅರ್ಧ ಗಂಟೆ ಸರಬರಾಜು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಆರು ಗಂಟೆಗಳ ಕಾಲ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಜೊತೆಗೆ ಮಳೆ ಹಲವಾರು ಕಡೆ ಬಿದ್ದಿದೆ. ಪಂಪುಸೆಟ್ಟನ್ನು ಉಪಯೋಗಿಸತಕ್ಕ ವಿದ್ಯುತ್ ಸರಬರಾಜು ಸರ್‌ಪ್ಲಸ್ ಆಗಿದೆ. ದಯವಿಟ್ಟು ಈ ಲೋಡ್ ಪದ್ಧತಿಯನ್ನು ಪುನರ್ ಪರಿಶೀಲನೆ ಮಾಡಿ ಪೂರ್ಣ ವಿದ್ಯುತ್ ಸರಬರಾಜನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಮಾನ್ಯ ಅಧ್ಯಕ್ಷರೇ, ಪಂಪುಸೆಟ್ಟನ್ನು ಉಪಯೋಗಿಸತಕ್ಕ ವಿದ್ಯುತ್ ಕೆಲವು ಕಡೆ ಸಂಪೂರ್ಣವಾಗಿದೆ. ಒಂದೆರಡು ಕಡೆ ಮಳೆ ಬಂದಿದೆ. ಆದರೂ ಬಳಕೆ ಕಡಿಮೆ ಆಗಿದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆ. ಯಾವಾಗ ಬೇಡಿಕೆ ಹಾಗೂ ಉತ್ಪಾದನೆ ಸರಿದೂಗಿಸಲ್ಪಡುತ್ತದೆ, ಆಗ ಅಂತಹ ಸಮಯದಲ್ಲಿ ಲೋಡ್ ಶೆಡ್ಡಿಂಗ್ ಅನ್ನು ತೆಗೆದುಹಾಕುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಇಲ್ಲಿ ಎರಡು ಗಂಟೆಗಳ ಕಾಲ ಎಂದು ಹೇಳುತ್ತಾರೆ. ಆದರೆ ೬ ಗಂಟೆಗಳ ಕಾಲ ವಿದ್ಯುತ್ ನಿಲ್ಲಿಸುತ್ತಾರೆ. ರಾತ್ರಿ ಕಾಲದಲ್ಲಿ ಅರ್ಧ ಗಂಟೆ ಕಾಲ ವಿದ್ಯುತ್ ಸರಬರಾಜು ನಿಲ್ಲಿಸಲಾಗುತ್ತದೆಂದು ಹೇಳುತ್ತಾರೆ. ಆದರೆ ಒಂದೆರಡು ಗಂಟೆಗಳ ಕಾಲ ನಿಲ್ಲಿಸುತ್ತಾರೆ. ಇದರಿಂದ ಸಾಕಷ್ಟು ಅನಾಹುತಗಳಾಗುತ್ತವೆ. ಆದ್ದರಿಂದ ರಾತ್ರಿ ಹೊತ್ತಿನಲ್ಲಿ ವಿದ್ಯುತ್ ನಿಲುಗಡೆ ಮಾಡುವುದನ್ನು ತಪ್ಪಿಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಷೆಡ್ಯೂಲ್ ಪ್ರಕಾರ ಈಗ ಎರಡು ಗಂಟೆಗಳ ಕಾಲ ವಿದ್ಯುತ್‌ನನ್ನು ನಿಲ್ಲಿಸಲಾಗುತ್ತಿದ್ದರೂ ಸಹ ಕೆಲವು ಸಲ ಅನಿವಾರ್ಯ ಕಾರಣಗಳಿಂದ ಇನ್ನೂ ಹೆಚ್ಚು ಹೊತ್ತು ವಿದ್ಯುತ್‌ನನ್ನು ನಿಲ್ಲಿಸಬೇಕಾಗುತ್ತದೆ. ಈಗ ಕೋಲಾರದಲ್ಲಿ ಏನಾಗಿದೆ ಎಂದರೆ, ಅಲ್ಲಿನ ಎಂಇಎಸ್ ಎಸ್‌ನ ಮೇಲೆ ಒತ್ತಡ ಜಾಸ್ತಿ ಆಗಿದೆ. ರಾತ್ರಿ ಹೊತ್ತು ಟ್ರಾನ್ಸ್‌ಫಾರ್ಮರ್ ಮೇಲೆ ಹೆಚ್ಚಿನ ಲೋಡ್ ಇರು

ವುದಿಲ್ಲ ಎಂದು ಜನರು ಸಾಮಾನ್ಯವಾಗಿ ತಿಳಿದುಕೊಂಡಿರುತ್ತಾರೆ. ರಾತ್ರಿ ಹೊತ್ತು ಯಾರೂ ಸಹ ವಿದ್ಯುತ್ತನ್ನು ಹೆಚ್ಚು ಬಳಕೆ ಮಾಡುವುದಿಲ್ಲವೆಂದು ಕೆಲವರು ತಿಳಿದುಕೊಂಡಿರುವುದು ತಪ್ಪು. ನಮ್ಮ ರೆಕಾರ್ಡ್ ಪ್ರಕಾರ ದಿನದ ೨೪ ಗಂಟೆಗಳ ಕಾಲವೂ ಸಹ ಒಂದೇ ರೀತಿಯು ಒತ್ತಡ ಟ್ರಾನ್ಸ್‌ಫಾರ್ಮರ್ ಮೇಲೆ ಬೀಳುತ್ತಿರುತ್ತದೆ. ಪಂಪುಸೆಟ್ಟು ಇಟ್ಟುಕೊಂಡಿರುವವರು ಕರೆಂಟ್ ಇದ್ದಾಗಲೆಲ್ಲಾ ಅದನ್ನು ಬಳಸುತ್ತಾರೆ. ಈ ಕಾರಣದಿಂದ ನಾವು ಲೋಡ್ ಶೆಡ್ಡಿಂಗ್ ಮಾಡಬೇಕಾಗುತ್ತದೆ. ಈಗ ಆಲ್ಲಿ ಇನ್ನೂ ಒಂದರಡು ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುತ್ತಿದೆ. ಇದರ ಕೆಲಸ ಮುಗಿದ ನಂತರ ಕೋಲಾರ ದಲ್ಲಿರುವ ಟ್ರಾನ್ಸ್‌ಫಾರ್ಮರ್ ಮೇಲೆ ಈಗ ಬೀಳುತ್ತಿರುವ ಲೋಡ್ ಕಡಿಮೆ ಆಗುತ್ತದೆ. ಲೋಡ್ ಕಡಿಮೆ ಆದಾಗ ಈಗ ಅನಿರೀಕ್ಷಿತವಾಗಿ ಏನು ವಿದ್ಯುತ್ ನಿಲುಗಡೆ ಆಗುತ್ತಿದೆ, ಅದು ತಪ್ಪುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.— ನಾವು ಈ ಪ್ರಶ್ನೆಯನ್ನು ಇಲ್ಲಿ ಪದೇ ಪದೇ ಕೇಳುತ್ತಿದ್ದೇವೆ. ಆದರೆ ಮಾನ್ಯ ಮಂತ್ರಿಗಳು ಇದೇ ರೀತಿಯ ಉತ್ತರ ಕೊಡುತ್ತಾರೆ. ವೇಮಗಲ್‌ನಲ್ಲಿ ಹಗಲಂ ಹೊತ್ತು ೬ ಗಂಟೆಗಳಿಗೂ ಹೆಚ್ಚಿನ ಕಾಲ ವಿದ್ಯುತ್ ಸರಬರಾಜು ಇರುವುದಿಲ್ಲ. ಆದ್ದರಿಂದ ಕೇವಲ ೨ ಗಂಟೆಗಳಷ್ಟು ಕಾಲ ಮಾತ್ರ ಲೋಡ್ ಶೆಡ್ಡಿಂಗ್ ಮಾಡಲಾಗುತ್ತದೆ ಎಂಬ ಆಶ್ವಾಸನೆಯನ್ನು ಕೊಡುತ್ತೀರಾ ? ರಾತ್ರಿ ಹೊತ್ತು ಎರಡು ಗಂಟೆಗಳ ಕಾಲ ವಿದ್ಯುತ್ ನಿಲ್ಲಿಸುವುದನ್ನು ತಪ್ಪಿಸುತ್ತೀರಾ ? ದಿನದಲ್ಲಿ ಕೇವಲ ಎರಡು ಗಂಟೆಗಳ ಕಾಲ ಮಾತ್ರ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆಂಬ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ಈಗ ನಗರಗಳಲ್ಲಿ ಮಾತ್ರ ಎರಡು ಗಂಟೆಗಳ ಕಾಲ ವಿದ್ಯುತ್ ಸರಬ ರಾಜನ್ನು ನಿಲ್ಲಿಸಲಾಗುತ್ತಿದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ೮ ಗಂಟೆಗಳ ಕಾಲ ವಿದ್ಯುತ್ ಸರಬ ರಾಜನ್ನು ನಿಲ್ಲಿಸಲಾಗುತ್ತಿದೆ. ತಾವು ಈ ಎರಡನ್ನೂ ಸೇರಿಸಿ ಹೇಳುತ್ತಿದ್ದೀರಿ. ಕೆ.ಜಿ.ಎಫ್. ಮತ್ತು ಕೋಲಾರ ನಗರ ಪ್ರದೇಶಗಳಲ್ಲಿ ಎರಡು ಗಂಟೆಗಳ ಕಾಲ ಮಾತ್ರ ಲೋಡ್ ಶೆಡ್ಡಿಂಗ್ ಮಾಡುವ ಕ್ರಮ ಜಾರಿಯಲ್ಲಿದೆ. ಇಷ್ಟು ನಗರಗಳಿಗೆ ಮಾತ್ರ ಅನ್ವಯವಾಗುತ್ತದೆ. ಮಾನ್ಯ ಸದಸ್ಯರು ವೇಮಗಲ್ ಬಗ್ಗೆ ಹೇಳಿದ್ದಾರೆ. ಅಲ್ಲಿ ಮತ್ತೊಂದು ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಿದ ಮೇಲೆ ಲೋಡ್ ಶೆಡ್ಡಿಂಗ್‌ನ ಅವಧಿ ಕಡಿಮೆ ಆಗುತ್ತದೆ ಮತ್ತು ಅನಿರೀಕ್ಷಿತವಾಗಿ ವಿದ್ಯುತ್ ಹೋಗುವುದು ಸಹ ಕಡಿಮೆ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ರೈತರ ಹಿತದೃಷ್ಟಿಯಿಂದ ಅವರ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಕಡಿತ ಮಾಡಬಾರದು. ಅನೇಕ ಜನ ರೈತರು ಕೇವಲ ಎರಡು ಮೂರು ಎಕರೆ ಜಮೀನು ಇಟ್ಟುಕೊಂಡು ಪಂಪ್‌ಸೆಟ್ಟುಗಳ ಮೂಲಕ ವ್ಯವಸಾಯ ಮಾಡುತ್ತಿರುತ್ತಾರೆ. ಅಂತಹವರಿಗೆ ವಿದ್ಯುತ್ ಕಡಿತ ಮಾಡದ ದಿನದ ಎಲ್ಲಾ ಕಾಲದಲ್ಲಿಯೂ ವಿದ್ಯುತ್‌ನ್ನು ಒದಗಿಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.— ರೈತರಿಗೆ ದಿನದ ೨೪ ಗಂಟೆಗಳ ಕಾಲವೂ ವಿದ್ಯುತ್ ಒದಗಿಸ ಬೇಕೆಂಬುದೇ ಸರ್ಕಾರದ ಮಹದಾಸೆ ಆಗಿದೆ. ಆದರೆ ನಮ್ಮಲ್ಲಿ ವಿದ್ಯುತ್ ಉತ್ಪಾದನೆ ಕಡಿಮೆ ಆಗಿರು ವುದರಿಂದ ದಿನದಲ್ಲಿ ೧೬ ಗಂಟೆಗಳ ಕಾಲ ವಿದ್ಯುತ್‌ನ್ನು ಒದಗಿಸಲಾಗುತ್ತಿದೆ. ಈ ಅವಧಿಯಲ್ಲಿ ರೈತರು ಬಾವಿಯಲ್ಲಿರುವ ನೀರನ್ನು ಪಂಪ್‌ಸೆಟ್ಟುಗಳ ಮೂಲಕ ಬಳಸಿಕೊಂಡರೆ ಎಂತಹ ರೈತರಾದರೂ ಉದ್ಧಾರ ವಾಗಬಹುದು. ಆದರೆ ೧೬ ಗಂಟೆಗಳ ಕಾಲ ಪಂಪ್‌ಸೆಟ್ಟುಗಳನ್ನು ಉಪಯೋಗಿಸಲು ಅನೇಕ ಬಾವಿಗಳಲ್ಲಿ ನೀರೇ ಇರುವುದಿಲ್ಲ. ಅಂತಹ ಪರಿಸ್ಥಿತಿ ಇದೆ. ಈಗ ನಾವು ದಿನದಲ್ಲಿ ೮ ಗಂಟೆಗಳನ್ನು ಬಿಟ್ಟು ಇನ್ನುಳಿದ ೧೬ ಗಂಟೆಗಳವರೆಗೆ ವಿದ್ಯುತ್ತನ್ನು ರೈತರ ಪಂಪ್‌ಸೆಟ್ಟುಗಳಿಗೆ ಒದಗಿಸಲು ವಿಶೇಷ ಪ್ರಯತ್ನ ಮಾಡು ತ್ತಿದ್ದೇವೆ.

ಅಧ್ಯಕ್ಷರು.— ಈಗ ಮಾನ್ಯ ಖಾರ್ಗೆ ಶ್ರೀ ಕೆ. ಹೆಚ್. ಪಾಟೀಲ್ ಅವರಪ್ರಶ್ನೆಯನ್ನು ಕೇಳ ಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ಅಧ್ಯಕ್ಷರೇ, ನಾನು ಶ್ರೀ ಪಾಟೀಲರ ಪರವಾಗಿ ೧೪೮೫ನೇ ಪ್ರಶ್ನೆಯನ್ನು ಕೇಳುತ್ತೇನೆ.